

# ಸೀರೆ ಫಳ ಫಳ ಹೊಳೆಯಬೇಕೆ?

ರೇಷ್ಮೆ ಸೀರೆ, ಕನ್ನಡಿ ವರ್ಕ್, ಕುಸುರಿ ಕೆಲಸ, ಥ್ರೆಡ್ ವರ್ಕ್ ಇರುವ ಸೀರೆಗಳನ್ನು ಒಗೆಯುವಾಗ ನಾಜೂಕಾಗಿರಬೇಕು. ಇಂಥ ಸೀರೆಗಳನ್ನು ಡ್ರೈವಾಷ್ ಮಾಡಿಸುವುದು ಒಳ್ಳೆಯದು. ಇಂತಹ ವರ್ಕ್ಸ್ ಇರುವ ಬಟ್ಟೆಯನ್ನು ಒಂದು ತೆಳುವಾದ ಬಟ್ಟೆಯಲ್ಲಿ ಸುತ್ತಿಟ್ಟರೆ, ನಾಜೂಕಿನ ಬಟ್ಟೆಗಳು ತನ್ನ ತಾಜಾತನವನ್ನು ಬೇಗ ಕಳೆದು ಕೊಳ್ಳುವುದಿಲ್ಲ.

**■ ಪದ್ಮಾ ಮೂರ್ತಿ, ಅರಸೀಕೆರೆ**

ಮದುವೆ– ಮುಂಜಿ ಹೀಗೆ ಯಾವ ಸಮಾರಂಭದಲ್ಲಿ ನೋಡಿದರೂ ಕುಂದನ್‌ಗಳು, ಕನ್ನಡಿ ವರ್ಕ್, ಸ್ವರೋಸ್ಕಿಗಳು, ಜರಿ, ಬೆಳ್ಳಿ, ಬಳ್ಳಿಗಳಿಂದ ಮಾಡಿರುವ ಡಿಸೈನರ್ ಸೀರೆಗಳು, ಡ್ರೆಸ್‌ಗಳು ರಾರಾಜಿಸುತ್ತವೆ. ಆದರೆ ಇವನ್ನು ಕೊಳ್ಳುವಾಗ ಹೊಲಿಗೆಗಳು ಗಟ್ಟಿಯಾಗಿದೆಯೇ, ಇಲ್ಲವೋ ಸರಿಯಾಗಿ ನೋಡಿಕೊಂಡು ಕೊಳ್ಳಬೇಕು. ದಾರಗಳು ಕೀಳದಂತೆ ಇನ್ನೊಂದು ಹೊಲಿಗೆಯನ್ನಾದರೂ ಹಾಕಬೇಕು. ಇವೆಲ್ಲವೂ ನಮ್ಮ ಬಟ್ಟೆಗಳನ್ನು ಭದ್ರವಾಗಿರಿಸುತ್ತದೆ. ಇಂತಹ ಬಟ್ಟೆ ಬರೆಗಳನ್ನು ಇತರ ಬಟ್ಟೆಗಳೊಂದಿಗೆ ನೆನೆಸುವುದೂ ಬೇಡ.

ಡಿಸೈನ್ ಬಟ್ಟೆಗಳನ್ನು ಧರಿಸಿದ ನಂತರ ಪ್ರತಿಯೊಂದು ಬಾರಿಯೂ ಒಗೆಯಬಾರದು. ಯಾಕೆಂದರೆ, ಪ್ರತಿಸಾರಿಯೂ ಒಗೆಯುತ್ತಿದ್ದರೆ ಅದರ ಥಳುಕು–ಬಳುಕು, ವಿನ್ಯಾಸ, ದಾರ ಕೀಳುವುದು, ಮಣಿ ವರ್ಕ್, ಕುಸುರಿ ಕೆಲಸ, ಬಟ್ಟೆಯ ಬಣ್ಣ ಮಾಸಿ ತನ್ನ ಹೊಳಪನ್ನು ಕಳೆದುಕೊಳ್ಳುತ್ತದೆ. ಇಂತಹ ವರ್ಕ್ಸ್ ಇರುವ ಬಟ್ಟೆಯನ್ನು ಒಂದು ತೆಳುವಾದ ಬಟ್ಟೆಯಲ್ಲಿ ಸುತ್ತಿಟ್ಟರೆ, ನಾಜೂಕಿನ ಬಟ್ಟೆಗಳು ತನ್ನ ತಾಜಾತನವನ್ನು ಬೇಗ ಕಳೆದು ಕೊಳ್ಳುವುದಿಲ್ಲ.

ರೇಷ್ಮೆ, ಮೈಸೂರು ಸಿಲ್ಕ್, ಕುಂದನ್, ಜರ್ದೋಸಿ ಮುಂತಾದ ಸೀರೆಗಳಂತೂ ಇನ್ನೂ ನಾಜೂಕಾಗಿರುತ್ತವೆ. ಅದರ ಮೇಲೆ ವಿಶೇಷ ಡಿಸೈನ್‌ಗಳು, ಥ್ರೆಡ್ ವರ್ಕ್ಸ್ ಇರುವ ಬಟ್ಟೆಗಳನ್ನು ಮೃದುವಾದ ಸಾಫ್ಟ್ ಶಾಂಪೂವಿನಿಂದ ಐದು ನಿಮಿಷ ನೆನೆಸಿ ನವಿರಾಗಿ ಕೈನಿಂದ ಸ್ವಚ್ಛಗೊಳಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ವಾಷಿಂಗ್ ಮೆಷಿನ್‌ಗೆ ಹಾಕುವುದು, ಕೈಯಿಂದ ಬಡಿಯುವುದು ಬೇಡ. ಬಹಳ ಮೃದುವಾಗಿ ಇಂತಹ ಬಟ್ಟೆಯನ್ನು ಕುಸುಕಿ, ನೆರಳಿನಲ್ಲಿ ಒಣಗಿಸಿಕೊಳ್ಳಿ. ಒದ್ದಾಟ ಮಾಡಿ ಒಗೆದರೆ, ಡಿಸೈನ್ ಹೋಗುವುದಲ್ಲದೆ ಕುಸುರಿ ಮಣಿಗಳು, ಗಾಜುಗಳು ಹಾಳಾಗುತ್ತವೆ. ಡ್ರೈಕ್ಲೀನ್‌ಗೆ ಕೊಟ್ಟರೂ ಅವರಿಗೆ ಎಚ್ಚರಿಕೆಯಿಂದ ಕೊಡಿ. ಇದರಿಂದ ನಿಮ್ಮ ಬಟ್ಟೆ ಸುರಕ್ಷಿತವಾಗಿರುತ್ತದೆ.

'ಎಂಬ್ರಾಯಿಡರಿ ವರ್ಕ್ಸ್' ಮಾಡಿದ ಚಾಂದಿನಿ ತರಹದ ಡ್ರೆಸ್‌ಗಳೇ ಅಲ್ಲದೆ ಬಣ್ಣದಲ್ಲಿರುವ ನೀಲಿ, ಹಸಿರು, ಮೆರೂನ್, ನೇರಳೆ ಇಂತಹ ಬಣ್ಣದ ಡ್ರೆಸ್‌ಗಳನ್ನು ಅಧಿಕ ಸಮಯ ನೀರಲ್ಲಿ ನೆನೆಸಿಡಬಾರದು. ಹೀಗೆ ಮಾಡಿದರೆ ಅವು ತಮ್ಮ ಅಸಲೀ ಬಣ್ಣವನ್ನು ಕಳೆದುಕೊಂಡು ಕಾಂತಿಹೀನವಾಗುತ್ತವೆ. ಇಂತಹ ಬಟ್ಟೆಗಳನ್ನು 'ವಾಷಿಂಗ್ ಮೆಷಿನ್'ಗೆ ಹಾಕುವುದೇ ಬೇಡ.

ಪರಿಮಳ ದ್ರವ್ಯಗಳನ್ನು ಸೀರೆ ಬಟ್ಟೆಯ ಮೇಲೆ ನೇರವಾಗಿ ಹಾಕಿಕೊಳ್ಳಬಾರದು. ಇದರಿಂದ 'ಕಲೆ' ಬೀಳುವುದಲ್ಲದೆ ವಸ್ತ್ರ ತನ್ನ ಗಟ್ಟಿತನವನ್ನು ಕಳೆದು ಕೊಳ್ಳುತ್ತವೆ. ಬೆಲೆ ಬಾಳುವ ಸೀರೆಗಳು, ಬಟ್ಟೆಗಳನ್ನು ಬಿಳಿ ಹತ್ತಿ ವಸ್ತ್ರದಲ್ಲಿ (ಪಂಚೆ ತುಂಡು) ಸುತ್ತಿಡಿ, ಪಾಲಿಥೀನ್ ಚೀಲಗಳಲ್ಲಿ ಕೆಲವು ಮಹಿಳೆಯರು ಸುತ್ತಿಡುತ್ತಾರೆ. ಇದರಿಂದ ಸೀರೆ ಜರಿಯ ಮೆರಗು ಕುಂದಿ ಹೋಗುವುದು. ಒಂದು ವೇಳೆ ಮನೆಯಲ್ಲಿ 'ವಾಷ್' ಮಾಡಬೇಕಾದಲ್ಲಿ ಸೌಮ್ಯವಾದ ಸೋಪ್‌ನಿಂದ ಒಗೆಯಬೇಕು.

ಗಡಸು ನೀರಿನಲ್ಲಿ, ಕ್ಲೋರಿನ್ ಉತ್ಪನ್ನ ಸೋಪುಗಳ ಬಳಕೆ ಮಾಡಿದರೆ ಸೀರೆ ಹಾಳಾಗುತ್ತದೆ. ಬಾರ್ಡರ್‌ಗಳನ್ನು ಪ್ರತ್ಯೇಕವಾಗಿ ಕ್ಲೀನ್ ಮಾಡಿ ರೇಷ್ಮೆ ಬಟ್ಟೆಗಳನ್ನು ಒಗೆದ ಕೂಡಲೇ ಪದರ ಪದರವಾಗಿ ಒಣಗುವಂತೆ ಮಾಡಿ. ಕಾರಣ ತೇವಾಂಶ ಸೀರೆಗೆ ಹಾನಿ ಉಂಟು ಬಣ್ಣವನ್ನು ಮಬ್ಬಾಗಿಸುತ್ತದೆ. ನಂತರ ಕಡಿಮೆ ಬಿಸಿಯಲ್ಲಿ ಸೀರೆಗಳನ್ನು ಇಸ್ತ್ರಿ ಮಾಡಿರಿ, ಹ್ಯಾಂಗರಿನಲ್ಲಿ ನೀಟಾಗಿ ಹಾಕಿ.

ಸೀರೆಗಳ ಬಗ್ಗೆ ಎಚ್ಚರ ವಹಿಸಿದರೆ ಹೊಸದರಂತೆ, ಹಸನಾಗಿ ಫಳ ಫಳ ಹೊಳೆಯುತ್ತಿರುತ್ತದೆ. ಉಡಲೂ ಖುಷಿಯಾಗುತ್ತದೆ. ■